ತಿರುಪತಿಯಲ್ಲಿರುವ ವಸತಿಗೃಹಗಳು

2466 (3105) : ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಉಸ್ತುವಾರಿಯಲ್ಲಿ ತಿರುಪತಿಯಲ್ಲಿರುವ ವಸತಿ ಗೃಹಗಳು ಎಷ್ಟು;

ಆ) ಈ ವಸತಿಗೃಹಗಳಲ್ಲಿ ಯಾತ್ರಾರ್ಥಿಗಳಲ್ಲಿ ದೊರೆಯುವ ಸೌಲಭ್ಯಗಳೇನು; ದಿನವೊಂದಕ್ಕೆ ಎಷ್ಟು ಜನ ಯಾತ್ರಾರ್ಥಿಗಳು ತಂಗಲು ಅವಕಾಶವಿದೆ;

ಇ) ಈ ವಸತಿ ಗೃಹಗಳಿಂದ ಸರ್ಕಾರಕ್ಕೆ ವಾರ್ಷಿಕವಾಗಿ ಬರುವ ಆದಾಯ ಹಾಗೂ ಖರ್ಚು ಎಷ್ಟು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

ಅ) ರಾಜ್ಯ ಸರ್ಕಾರದ ಉಸ್ತುವಾರಿಯಲ್ಲಿ ಈ ಕೆಳಕಂಡ ವಸತಿ ಗೃಹಗಳು ಇರುತ್ತವೆ:

1.	ಕರ್ನಾಟಕ ಪ್ರವಾಸಿ ಸೌಧ	51 ಕೊಠಡಿಗಳು
2.	ಕರ್ನಾಟಕ ಕಲ್ಯಾಣ ಮಂಟಪ	24 ಕೊಠಡಿಗಳು
3.	ಅತಿಥಿ ಗೃಹ	8 ಕೊಠಡಿಗಳು
4.	ಕಾಟೇಜ್	17 ಕಾಟೇಜ್
		(52 ಕೊಠಡಿಗಳು)

ಆ) ತಿರುಮಲ ಕ್ಷೇತ್ರದಲ್ಲಿನ ವಸತಿ ಗೃಹಗಳಲ್ಲಿ ತಂಗಲು ಬರುವ ಯಾತ್ರಾರ್ಥಿಗಳಿಗೆ ಬಾಡಿಗೆ ಆಧಾರದ ಮೇಲೆ ಕೊಠಡಿಯನ್ನು ನೀಡಿ ಉತ್ತಮ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ. ಈ ವಸತಿ ಗೃಹಗಳಲ್ಲಿ ದಿನ ಒಂದಕ್ಕೆ 500 ಜನ ಯಾತ್ರಾರ್ಥಿಗಳು ತಂಗಲು ಅವಕಾಶ ಇರುತ್ತದೆ.

ಇ) 2002–2003ನೇ ಸಾಲಿನಲ್ಲಿ ತಿರುಪತಿಯಲ್ಲಿನ ಕರ್ನಾಟಕ ರಾಜ್ಯ ಛತ್ರದಿಂದ ರೂ. 82.00 ಲಕ್ಷ ಆದಾಯ ಬಂದಿರುತ್ತದೆ. ಛತ್ರದ ನಿರ್ವಹಣೆಗಾಗಿ ರೂ. 72.00 ಲಕ್ಷ ಖರ್ಚು ಮಾಡಲಾಗಿರುತ್ತದೆ.

ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿ

2467 (3106) : ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕು ವ್ಯಾಪ್ತಿಯ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಆ) ಮುಜರಾಯಿ ದೇವಸ್ಥಾನಗಳ ಅರ್ಚಕರಿಗೆ ಈಗ ನೀಡುತ್ತಿರುವ ವೇತನವೆಷ್ಟು; ಈ ವೇತನವನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಮುಜರಾಯಿ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ ಬಗ್ಗೆ ಸರ್ಕಾರವು ಕಳೆದ 5 ವರ್ಷಗಳ ಅವಧಿಯಲ್ಲಿ ಒಟ್ಟು 20

ಧಾರ್ಮಿಕ ಸಂಸ್ಥೆಗಳ ಜೀರ್ಣೋದ್ಧಾರ, ರಿಪೇರಿಗಾಗಿ ರೂ. 6,05,000–00ಗಳನ್ನು ಸರ್ಕಾರವು ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ದೇವಾಲಯಗಳ ಸಿಬ್ಬಂದಿಗಳಿಗೆ ಸರ್ಕಾರದಿಂದ ಯಾವುದೇ ವೇತನ ನೀಡುತ್ತಿಲ್ಲ. ಆದರೆ ಅವರಿಗೆ ಆಯಾಯಾ ಸಂಸ್ಥೆಗಳ ವಾರ್ಷಿಕ ಆದಾಯಕ್ಕೆ ಅನುಗುಣವಾಗಿ ದೇವಾಲಯದ ನಿಧಿಯಿಂದ ವೇತನ ನೀಡಲಾಗುತ್ತಿದೆ.

ಬೆಂಗಳೂರು ವಿಭಾಗದಲ್ಲಿನ ಲೋಕೋಪಯೋಗಿಯ ವಿವಿಧ ಯೋಜನೆಗಳಿಗೆ ಹಣ ಬಿಡುಗಡೆ ಮಾಡುವುದು

2468 (3107) : ಶ್ರೀ ಕೃಷ್ಣಪ್ಪ ವಿ (ದೊಡ್ಡಬಳ್ಳಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ವಿಭಾಗದಲ್ಲಿನ ಲೋಕೋಪಯೋಗಿಯ ವಿವಿಧ ಯೋಜನೆ ಹಾಗೂ ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಈವರೆಗೆ ಪಾವತಿಸಲು ಬಾಕಿ ಇರುವ ಬಿಲ್ಲುಗಳ ಸಂಖ್ಯೆ ಎಷ್ಟು; ಇವುಗಳು ಯಾವ ವರ್ಷದಿಂದ ಬಾಕಿ ಇವೆ;

ಆ) ಬಾಕಿ ಇರುವ ಬಿಲ್ಲುಗಳ ಒಟ್ಟು ಮೊತ್ತವೆಷ್ಟು;

ಇ) ಬಾಕಿ ಇರುವ ಬಿಲ್ಲುಗಳಿಗೆ ಸರ್ಕಾರದಿಂದ ಯಾವಾಗ ಹಣ ಬಿಡುಗಡೆ ಮಾಡಲಾಗುವುದು:

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಯಲ್ಲಿನ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಲೋ.ಇ. ಬೆಂಗಳೂರು ವಿಭಾಗದಲ್ಲಿ ಯೋಜನೆ ಲೆಕ್ಕ ಶೀರ್ಷಿಕೆಯಡಿಯಲ್ಲಿನ ಕಾಮಗಾರಿಗಳ ಒಟ್ಟು 72 ಬಿಲ್ಲುಗಳು ಇದ್ದು ಇವುಗಳು 2002–03 ನೇ ಸಾಲಿನಿಂದ ಬಾಕಿ ಇರುತ್ತದೆ ಹಾಗೂ ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿನ ಕಾಮಗಾರಿಗಳ ಒಟ್ಟು 1807 ಬಿಲ್ಲುಗಳು ಬಾಕಿ ಇದ್ದು ಇವು 2001 ರಿಂದ ಬಾಕಿ ಇರುತ್ತವೆ.

ಆ) ಲೋ.ಇ. ಬೆಂಗಳೂರು ವಿಭಾಗದಲ್ಲಿ ಯೋಜನೆ ಅಡಿಯಲ್ಲಿ ರೂ. 348.29 ಲಕ್ಷ ಹಾಗೂ ಯೋಜನೇತರ ಅಡಿಯಲ್ಲಿ ರೂ. 1161.85 ಲಕ್ಷ ಒಟ್ಟು ರೂ. 1510.14 ಲಕ್ಷ ಬಿಲ್ಲುಗಳು ಪಾವತಿಗಾಗಿ ಬಾಕಿ ಇರುತ್ತದೆ.

ಇ) ಗುತ್ತಿಗೆದಾರರು ಮಾಡಿದಂತಹ ಕಾಮಗಾರಿಗಳಿಗೆ ಅನುದಾನದ ಲಭ್ಯತೆ ಹಾಗೂ ಕಾಲಕಾಲಕ್ಕೆ ಸಂಪನ್ಮೂಲಗಳನ್ನಾಧರಿಸಿ ಆರ್ಥಿಕ ಇಲಾಖೆಯಿಂದ ಹಣ ಭರವಸೆ ಪತ್ರ ಬಿಡುಗಡೆಯಾದ ನಂತರ ಗುತ್ತಿಗೆದಾರರ ಬಿಲ್ಲುಗಳನ್ನು ಜೇಷ್ಟತೆಯ ಆಧಾರದ ಮೇಲೆ ಪಾವತಿಸಲಾಗುವುದು.

ಬರ ಪೀಡಿತ ಪ್ರದೇಶಗಳಲ್ಲಿ ಭೂ ಕಂದಾಯ ಮನ್ನಾ ಬಗ್ಗೆ

2470 (2833) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಭೂ ಕಂದಾಯ ಮನ್ನಾ ಮಾಡಲು ಸರ್ಕಾರ ನಿರ್ಧರಿಸಿದೆ; (ಜಿಲ್ಲಾವಾರು ವಿವರ ನೀಡುವುದು):